ಭಾರತದ ಗ್ರಾಮೀಣ ಸೊಗಡನ್ನು ನೆನಪಿಸುವಂತೆ, ಇದು ಇವರದೇ ಕಲಾಕೃತಿಯೆಂದು ಗುರುತಿಸಲಾಗದಷ್ಟು ಅವು ಕೆಲವು ಕಲಾವಿದರ ಕೃತಿಗಳೊಂದಿಗೆ ಪರಸ್ಪರ ಸಾದೃಶ್ಯ ಹೊಂದಿರುತ್ತಿದ್ದವು. ಜೆಮಿನಿರಾಯ್, ಶಿವಾಕ್ಸ್ ಚಾವ್ಡಾ ಹಾಗೂ ಪಾಟೀಲರ ಜಾನಪದ ಕೃತಿಗಳನ್ನು ಪರಸ್ಪರ ಭಿನ್ನವೆಂದು ಗುರುತಿಸಲು ಕಲೆಯ ಆಳವಾದ ಜ್ಞಾನಿಯೇ ಆಗಬೇಕಿತ್ತು. ಪಾಟೀಲರು ಶೈಲಿಯು ಹೀಗೆ ಶೈಲಿಯ ನಿರಾಕರಣೆಯ ಚಿತ್ರಗಳಿಂದಲೇ ಖ್ಯಾತವಾಗಿವೆ.

ಮುಂಬಯಿಯ ಚಿತ್ರಕಲಿಕೆಯಿಂದ ಮೈಗೂಡಿಸಿಕೊಳ್ಳಲಾದ ಇವರ ಭಾವಚಿತ್ರಣ ಪ್ರಾತ್ಯಕ್ಷಿಕೆ ಕೃತಿಗಳು ಎರಡನೇ ಬಗೆಯವು. ಇವರು ಏನನ್ನು ಚಿತ್ರಿಸಿದರು ಎಂಬುದಕ್ಕಿಂತ ಹೇಗೆ ಚಿತ್ರಿಸುತ್ತಾರೆ ಎಂಬುದನ್ನು ಗಮನಿಸಲು ಪ್ರಾತ್ಯಕ್ಷಿಕೆ ಒಂದು ಸಂಪ್ರದಾಯವೇ ಆಗಿತ್ತು.

ಪಾಟೀಲರ ಮೂರನೇ ಚಿತ್ರಸೃಷ್ಟಿಯ ಶೈಲಿ 'ಕೊಲಾಜ್' ಮಾದರಿಯದು. ಹಲವು ನೈಜ ಚಿತ್ರಗಳಿಂದ ಆಯ್ದ ಭಾಗಗಳನ್ನು ಅದರ ಅಸಲಿ ಆಕಾರಗಳಿಂದ ಪ್ರತ್ಯೇಕಿಸಿ, ಬೇರ್ಪಡಿಸಿದ ಅಂಗಗಳನ್ನು ಮತ್ತೊಂದು ಅನನ್ಯ ದೃಶ್ಯವನ್ನಾಗಿಸಿ ರೂಪಿಸಿ, ನೈಜ ಜಗತ್ತನ್ನು ಹಲವು ತುಂಡುಗಳನ್ನಾಗಿಸಿ, ಅದೇ ಕಾಲಕ್ಕೆ ಪರ್ಯಾಯ ಗೋಚರ ಜಗತ್ತನ್ನು ನೆನಪಿಸುವಂತೆ ಸೃಷ್ಟಿಸುವ ತಂತ್ರ ಕೊಲಾಜ್. ಪಾಟೀಲರು ತಮ್ಮ ವೃತ್ತಿ ಬದುಕನ್ನು ಆರಂಭಿಸುವ ಕಾಲಕ್ಕೆ ಅವರ ಪರಿಚಿತರು ಮತ್ತು ಸರೀಕರು ನೂರು ಮೈಲು ಅಳತೆಯನ್ನು ದಾಟಿ ಅದರ ಹೊರಗಿನ ಜಗತ್ತನ್ನು, ಬದುಕನ್ನು ಕಂಡವರಾಗಿರಲಿಲ್ಲ. ಅಂದರೆ ಅವರೇ ಜಗತ್ತನ್ನು ಒಂದು ಪುಟ್ಟ, ಸ್ಪಷ್ಟ ಚಿತ್ರವನ್ನಾಗಿ ಕಂಡವರು. ಪಾಟೀಲರು ವಿಜಾಪುರದ ತಿಕೋಟ ಗ್ರಾಮದಲ್ಲಿ ಬೆಳೆದು, ಮುಂಬಯಿಯಲ್ಲಿ ನಾಲ್ಕೈದು ವರ್ಷ, ನಂತರ ಹುಬ್ಬಳ್ಳಿ–ಧಾರವಾಡ, ಬೆಂಗಳೂರು ಮುಂತಾದ ಕಡೆ ಕಂಡ ಬದುಕಿನ, ಜಗತ್ತಿನ ಚಿತ್ರಗಳ ಭಾಗಶಃ ಭಾಗಗಳನ್ನು ಒಟ್ಟು ಸೇರಿಸಿ ಸೃಷ್ಟಿಸಲಾದ ಚಿತ್ರಗಳೇ ಪಾಟೀಲರ 'ಕೊಲಾಜ್'ಗಳು.

★★★

'ಭಾರತೀಯ ಸಾಂಪ್ರದಾಯಿಕ ಕಲೆ ಒದಗಿಸಿಕೊಡಲಾಗದ ಗಮ್ಯವನ್ನು ಮಾಡರ್ನ್ ಆರ್ಟ್(ಅಥವಾ ಸಮಕಾಲೀನ ಕಲೆ) ನಮಗೆ ಒದಗಿಸಿಕೊಟ್ಟಿದೆ' ಎಂಬರ್ಥದ ಸ್ಪಷ್ಟ ಅಭಿಪ್ರಾಯ ಪಾಟೀಲರಿಗಿತ್ತು.

ಪಾಟೀಲರು ಏಕೆ ಹೀಗೆ ಕಲಾವಿದರಾಗಿ ಮೂರು ಬಗೆಯ ಕಲಾವ್ಯಕ್ತಿತ್ವಗಳನ್ನು ರೂಢಿಸಿಕೊಂಡಿದ್ದರು? ಸಂಸ್ಥೆಗಳೊಂದಿಗೆ ಗುರುತಿಸಿಕೊಳ್ಳದ, ಸಾಂಸ್ಥಿಕವಾಗಿ ಸ್ಥಾಪಿತರಾಗದ ಕಲಾವಿದರ ಸಾಧನೆಯನ್ನು ಜನಸಮೂಹಕ್ಕಾಗಿ ಉಳಿಸಿಕೊಳ್ಳುವುದು ಬಲು ಕಷ್ಟದ ಮಾತು. ಕೆ. ವೆಂಕಟಪ್ಪ (ಮೈಸೂರು ರಾಜಾಶ್ರಯ), ಕೆ.ಕೆ. ಹೆಬ್ಬಾರ್ (ಮುಂಬಯಿಯ ಪ್ರೋಗ್ರೆಸಿವ್ ಆರ್ಟ್ ಗ್ರೂಪ್), ರೋರಿಕ್ (ಚಿತ್ರಕಲಾ ಪರಿಷತ್ತು ಹಾಗೂ ವಾರ್ತಾ ಇಲಾಖೆ) ಕಲಾವಿದರಾಗಿ ಗುರುತಿಸಿಕೊಂಡವರು. ಹೀಗೆ ಗುರುತಿಸಿಕೊಂಡ ಇನ್ನೂ ಅನೇಕರು, ತಮಗೆ ನೆರವಾದ ಸಂಸ್ಥೆ ಶಿಥಿಲವಾದಂತೆ ಮರೆಗೆ ಸರಿದುಬಿಡುತ್ತಾರೆ. ಮತ್ತು ಮೌಖಿಕ ಪರಂಪರೆಯಲ್ಲಿ, ಅವರ ಪ್ರಭಾವಲಯದಲ್ಲಿ ಮಾತ್ರ ಉಳಿದುಕೊಳ್ಳುತ್ತಾರೆ. ಆದ್ದರಿಂದಲೇ ಅಂತಹವರು ಕಲಾವಿದರಾಗಿ ಜನಪ್ರಿಯರಾಗಿದ್ದರೂ, ಅವರ ಕಲಾಕೃತಿಗಳ ಪರಿಚಯವೇ ಜನಸಾಮಾನ್ಯರಿಗೆ ಆಗದೆ, ಕಾಲಾನುಕ್ರಮದಲ್ಲಿ ಅಂತಹವರ ಕೊಡುಗೆ ನಶಿಸಿಹೋಗುತ್ತದೆ. ಬಡಿಗೇರ, ನೂತನ ಕಲಾಶಾಲೆಯ ಹರಿಕಾರ ದಂಡಾವತಿಮಠ, ಕೆನ್ ಕಲಾಶಾಲೆಯ ಆರ್.ಎಂ. ಹಡಪದರ ಕೃತಿಗಳು ಇಂದು ನಮಗೆ ಅಲಭ್ಯ. ಮೈಸೂರಿನ ಹನುಮಯ್ಯ, ಮಾರ್ಕ್ಸ್‌ವಾದಿ ಆರ್.ಎಸ್. ನಾಯ್ಡು ಅಂತಹವರ ಕೃತಿಗಳು ಕಣ್ಣೆದುರೇ ಇರುವಾಗಲೂ ಅವರ ಜೀವನವಿವರಗಳು